ಶ್ರೀ ಬಿ. ಬೈರಪ್ಪಾಜಿ.-- ಜಮೀನು ಅಭಿವೃದ್ಧಿ ಬ್ಯಾಂಕ್ ಮೂಲಕ ವ್ಯವಸಾಯ ಸೇವಾ ಸಹಕಾರ ಸಂಘಗಳಿಗೆ ಕೊಟ್ಟಂಥ ಸಾಲಗಳಿಗೆ ಅನೇಕ ಕಡೆ ಸುಸ್ತಿ ಬಡ್ಡಿಯನ್ನು ವಸೂಲು ಮಾಡುತ್ತಿದ್ದಾರೆ. ಇದನ್ನು ನಿಲ್ಲಿಸುವುದಕ್ಕೆ ತಾವು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ? ಅದೇ ರೀತಿ ಹಾಗೆ ವಸೂಲು ಮಾಡಿದ್ದರೆ ಅವರ ಮೇಲೆ ಸಹ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಯಾವುದಾದರೂ ಒಂದು ಉದಾಹರಣೆಯನ್ನು ಹೇಳಿದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬಹುದು. ಸರ್ಕಾರಕ್ಕೆ ಇದುವರೆಗೂ ಅಂಥ ದೂರುಗಳು ಯಾವುದೂ ಬಂದಿಲ್ಲ. ಕಾನೂನಿಗೆ ವಿರುದ್ಧವಾಗಿ ಅಧಿಕಾರಿಗಳು ಕ್ರಮ ತೆಗೆದುಕೊಂಡಿದ್ದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ನಾನು ಈಗಾಗಲೇ ಮುಂಚಿನಿಯಬ್ಬರಿ ಹೇಳಿದ್ದೇನೆ.

ಶ್ರೀ ಪಿ. ರಾಮಚಂದ್ರರಾವ್.— ಸಾಲ ಮತ್ತು ಬಡ್ಡಿ ಎರಡೂ ಸೇರಿ ಸಾಲದ ಎರಡರಷ್ಟು ಆಗಿದ್ದರೆ ಅಂಥಾದ್ದನ್ನು ವಜಾ ಮಾಡುವುದಕ್ಕೆ ಆಜ್ಞೆ ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡಬೇಕು.

ಒಬ್ಬ ಮಾನ್ಯ ಸದಸ್ಯರು.— ಸಾಲದ ಎರಡುಪಟ್ಟು ಬಡ್ಡಿಯಾಗಿದ್ದರೆ, ಸಾಲವನ್ನು ವಸೂಲು ಮಾಡದೆ ವಜಾ ಮಾಡಬೇಕೆಂದು ಕೋರ್ಟಿನಲ್ಲಿ ತೀರ್ಮಾನವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಈ ಬಗ್ಗೆ ಅಧಿಕಾರಿಗಳಿಗೆ ಆದೇಶ ಕೊಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.— ಅದು ಸಹಕಾರ ಸಂಘಗಳಿಗೆ ಅನ್ವಯವಾಗುವುದಿಲ್ಲ ಎಂದು ನಾನು ತಿಳಿದಿರುತ್ತೇನೆ. ಈ ವಿಷಯವನ್ನೂ ಸಹ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆಂದು ನಾನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಈ ಪ್ರಶ್ನೆ ಒಂದೇ ಸಾರಿ ಬಡ್ಡಿಯನ್ನು ಕೊಡುವುದರಿಂದ ಬರುತ್ತದೆ, ಆಗಿಂದಾಗ್ಗೆ ಬಡ್ಡಿಯನ್ನು ಕಟ್ಟಿದ್ದರೆ ಇದು ಉದ್ಭವವಾಗುವುದಿಲ್ಲ. ಈ ವಿಚಾರ ಸರ್ಕಾರದ ಮುಂದೆ ಇದೆ.

ಹರಪನಹಳ್ಳಿ ತಾಲ್ಲೂಕಿನ ಹಳ್ಳಿಗಳಿಗೆ ವಿದ್ಯುತ್ ಸರಬರಾಜು

೩೭. ಶ್ರೀ ಬಿ. ಹೆಚ್. ಯಂಕಾನಾಯ್ಕ (ಹರಪನಹಳ್ಳಿ).— ಮಾನ್ಯ ವಿದ್ಯುಚ್ಛಕ್ತಿ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ. ?

(ಅ) ಹರಪನಹಳ್ಳಿ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿಗಿರುವ ಹಳ್ಳಿಗಳ ಸಂಖ್ಯೆ ಎಷ್ಟು ;

(ಆ) ಇನ್ನೆಷ್ಟು ಗ್ರಾಮಗಳಲ್ಲಿ ವಿದ್ಯುತ್ ಸರಬರಾಜು ಆಗಬೇಕು ಮತ್ತು ಈ ಕಾರ್ಯವನ್ನು ಇನ್ನೆಷ್ಟು ಕಾಲಾವಧಿಯಲ್ಲಿ ಪೂರೈಸಲಾಗುವುದು ?

ಶ್ರೀ ಜಿ. ಪೆಚ್. ಪಟೇಲ್ (ವಿದ್ಯುಚ್ಛಕ್ತಿ ಮತ್ತು ಅಬಕಾರಿ ಮಂತ್ರಿಗಳು). —

(ಅ) ೨೪೯ನೇ ಫೆಬ್ರುವರಿ ೧೯೭೩ರವರೆವಿಗೆ ೪೮ ಜನಗಣತಿಯಾದ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಆಗಿದೆ.

(ಆ) ಇನ್ನೂ ೨೫ ಜನಗಣತಿಯಾದ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಆಗಬೇಕು. ೧೯೯೦ರ ಒಳಗೆ ವಿದ್ಯುತ್ ಒದಗಿಸುವ ಗುರಿಯನ್ನು ಹೊಂದಲಾಗಿದೆ.

ಶ್ರೀ ಜಿ. ಪೆಚ್. ಪಟೇಲ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇನ್ನು ಎಷ್ಟು ಗ್ರಾಮಗಳಿಗೆ ವಿದ್ಯುತ್ ಸರಬರಾಜು ಆಗಬೇಕಾಗಿದೆ ಎಂದು ಕೇಳಿದ್ದಾರೆ. ಇನ್ನೂ ೨೫ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಆಗಬೇಕಾಗಿದೆ. ರೂರಲ್ ಎಲೆಕ್ಟ್ರಿಫಿಕೇಷನ್ ಕಾರ್ಪೊರೇಷನ್‌ನವರ ವ್ಯಾಪ್ತಿಯಲ್ಲಿ, ಬರುವಂತೆ ಪ್ರತಿವರ್ಷ ಸರಾಸರಿ ೮ ಗ್ರಾಮಗಳನ್ನು ನಾವು ಈ ಯೋಜನೆಯಲ್ಲಿ ಸೇರಿಸಿದರೆ ಮತ್ತು ಬರುವ ಮೂರು ವರ್ಷಗಳಲ್ಲಿ ಈ ೨೫ ಗ್ರಾಮಗಳಿಗೂ ವಿದ್ಯುತ್ ಸರಬರಾಜು ಮಾಡಿದರೆ ಹರಪನಹಳ್ಳಿಯಲ್ಲಿರತಕ್ಕಂಥ ಈ ಸಮಸ್ಯೆ ಪೂರ್ಣವಾದಂತಾಗುತ್ತದೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಈ ಲಂಬಾಣಿ ತಾಂಡಗಳು ಇರುವ ಕಡೆ ಮತ್ತು ಹರಿಜನ ಗಿರಿಜನ ಕೇರಿಗಳಲ್ಲಿ ಎಷ್ಟು ಆಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಈ ಲಂಬಾಣಿ ತಾಂಡಗಳು ಮತ್ತು ಹರಿಜನ-ಗಿರಿಜನ ಕೇರಿಗಳಲ್ಲಿ ಎಷ್ಟು ಆಗಿದೆ ಎಂಬುದರ ಬಗ್ಗೆ ನನ್ನಲ್ಲಿ ಈಗ ವಿವರ ಇಲ್ಲ ಅದನ್ನು ಪಡೆದು ನಾನು ನಿಮಗೆ ಕೊಡುತ್ತೇನೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಸ್ವಾಮಿ, ನಮ್ಮ ಭಾಗದಲ್ಲಿ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರು ಇಲ್ಲ ಎಂದು ನಾನು ಟೆಲಿಗ್ರಾಂ ಕೊಟ್ಟಿದ್ದೆ...

ಉಪಾಧ್ಯಕ್ಷರು.—ಅದೇ ಬೇರೆ ವಿಷಯ ; ದಯವಿಟ್ಟು ಕುಳಿತುಕೊಳ್ಳಿ,

ಶ್ರೀ ಲಕ್ಷ್ಮಯ್ಯ.—ಸ್ವಾಮಿ, ಕಾಂಗ್ರೆಸ್ ಸರ್ಕಾರದವರು ಕನ್ನಡ ರಾಜ್ಯೋತ್ಸವದ ವೇಳೆಗೆ ಗ್ರಾಮಾಂತರ ಪ್ರದೇಶದಲ್ಲಿ ಎಲ್ಲಿಲ್ಲ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಪೂರೈಸುತ್ತೇವೆ ಎಂದು ಹೇಳಿದ್ದರು. ಮುಂದಿನ ಕನ್ನಡ ರಾಜ್ಯೋತ್ಸವದ ವೇಳೆಗಾದರೂ ಅದನ್ನು ಪೂರೈಸುವುದಕ್ಕೆ ಆಗುತ್ತದೆಯೇ?

ಉಪಾಧ್ಯಕ್ಷರು.—ಇದು ಹರಪನಹಳ್ಳಿಗೆ ಸಂಬಂಧಪಟ್ಟ ಪ್ರಶ್ನೆ ; ನೀವು ಕೇಳತಕ್ಕಂಥಾದ್ದು ಬೇರೆ ಪ್ರಶ್ನೆ ; ದಯವಿಟ್ಟು ಕುಳಿತುಕೊಳ್ಳಿ.

ಮೈಸೂರು ನಗರಕ್ಕೆ ನೀರು ಸರಬರಾಜು

೭೪. ಶ್ರೀ ಹೆಚ್. ಗಂಗಾಧರ್ (ಕೃಷ್ಣರಾಜ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಮೈಸೂರು ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಕುಸಿದು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

(ಆ) ನಗರವು ಕೈಗಾರಿಕಾ ದೃಷ್ಟಿಯಿಂದ ಬೆಳೆಯುತ್ತಿರುವ ಹೊಸ ಪ್ರದೇಶಗಳಿಗೆ ಹುಡ್ಕೋ ಯೋಜನೆಯ ಮನೆಗಳನ್ನು ಕಟ್ಟಿರುವ ಕಡೆ ಇನ್ನೂ ನೀರು ಮತ್ತು ಒಳಚರಂಡಿ ವ್ಯವಸ್ಥೆಗಳಿಲ್ಲದೆ ತೊಂದರೆಯಾಗಿರುವುದರ ಬಗೆಗೆ ಸರ್ಕಾರದವರಿಗೆ ವರದಿ ಏನಾದರೂ ಬಂದಿದೆಯೆ?

(ಇ) ನೀರಿನ ಸಮಸ್ಯೆಯನ್ನು ಬಗೆಹರಿಸಲು ನಗರಕ್ಕೆ ಪ್ರತ್ಯೇಕವಾದ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ನಿರ್ಮಾಣದ ನಿಗಮವನ್ನು ರಚಿಸುವ ಆಲೋಚನೆಯನ್ನು ಸರ್ಕಾರ ಮಾಡುವುದೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

(ಅ) ಮೈಸೂರು ನಗರದ ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿ ನಡೆಯುತ್ತಿದೆ.

(ಆ) ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಮತ್ತು ನಗರ ವಿಶ್ವಸ್ಥ ಮಂಡಲಿಯವರು ಹುಡ್ಕೋ ಯೋಜನೆಯ ಮನೆಗಳಿಗೆ ತೇವಣಿಯನ್ನು ಸಂದಾಯ ಮಾಡಿರುವ ಬಡಾವಣೆಗಳಿಗೆಲ್ಲಾ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ತೇವಣಿಯನ್ನು ಕಟ್ಟದ ಕಡೆ ಮತ್ತು ಮನೆಗಳು ಇನ್ನೂ ನಿರ್ಮಾಣ ಹಂತದಲ್ಲಿರುವ ಭಾಗಗಳಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗಳಿಲ್ಲ.

(ಇ) ನೀರಿನ ಸರಬರಾಜು ಸಮರ್ಪಕವಾಗಿ ನಡೆಯುತ್ತಿರುವುದರಿಂದ ಮೈಸೂರು ನಗರಕ್ಕೆ ಪ್ರತ್ಯೇಕವಾದ ನೀರು ಸರಬರಾಜು ಮತ್ತು ಒಳಚರಂಡಿ ನಿಗಮವನ್ನು ರಚಿಸುವ ಯೋಚನೆ ಸರ್ಕಾರಕ್ಕೆ ಇಲ್ಲ. ಮೈಸೂರು ನಗರದ ನೀರು ಸರಬರಾಜು ವ್ಯವಸ್ಥೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ವರ್ಗಾಯಿಸುವ ವಿಷಯವನ್ನು ಸರ್ಕಾರ ಆಲೋಚಿಸುತ್ತಿದೆ.